ನನ್ನ ನರನಾಡಿಗಳಲ್ಲಿ ಪ್ರವಹಿಸತೊಡಗಿ ಆರ್ಯಪುತ್ರರು ಮೃಗಯಾ ವಿಹಾರದಿಂದ ಬಹಳ ದಣಿದಿರುವಂತಿದೆ ಎಂದೆ. ಹುಬ್ಬೇರಿಸಿ ಹಾಗೆಂದರೆ?' ಎಂದರು.

ಮೊದಲಿನಂತೆ ನೀವಿಲ್ಲ ಎಲ್ಲಿಂದ ಬಂದರೂ ನನ್ನ ಸಜ್ಜೆಗೆ ಮೊದಲು ಬರುವವರು... ಈ ಬಾರಿ ಬರಲಿಲ್ಲ ಎಂದೆ ಜೀನ್ವನಿಯಲ್ಲಿ.

ಯಾವಾಗಲೂ ಮೊದಲ ತುತ್ತು ನಿಮಗೇ ಎಂದರೆ... ಉಳಿದವರೂ ರಾಣಿಯರೆ ತಾನೇ? ಎಂದ ಧ್ವನಿಯ ಕಾವಿಗೆ...

ಇಲ್ಲ... ಇಲ್ಲ. ನಾನಿದನ್ನು ನಿರೀಕ್ಷಿಸಿರಲಿಲ್ಲ. ಏನೋ ಸರಿಯಿಲ್ಲ ಎಂಬ ಭಾವ ನನ್ನೊಳಗೊಳಗೇ ಬಲಿಯತೊಡಗಿತ್ತು. ಒಂದೆರಡು ತಿಂಗಳು ಪ್ರಭುಗಳು ಇದೇ ಮನಸ್ಥಿತಿಯಲ್ಲಿದ್ದರು. ಕ್ರಮೇಣ ತಮ್ಮ ಯಾವತ್ತಿನ ಮನಃಸ್ಥಿತಿಗೆ ಮರಳಿದರು. ತುಸು ಸಮಾಧಾನದಿಂದ ಇರತೊಡಗಿದೆ. ಇದ್ದಕ್ಕಿದ್ದಂತೆ ಒಂದು ದಿನ ಹಂಸಿನಿ ತುಸು ಉದ್ವೇಗದಿಂದ ಓಡುತ್ತಾ ನನ್ನ ಕಕ್ಷೆಗೆ ಬಂದು ಮಹಾರಾಣಿ ಆಸ್ಥಾನದಲ್ಲಿ ಪ್ರಭುಗಳು ಓಲಗದಲ್ಲಿರುವ ಹೊತ್ತು... ಯಾರೋ ತಾಪಸ ಹೆಣ್ಣೊಬ್ಬಳು ಇಬ್ಬರು ಋಷಿಗಳ ಜೊತೆ ಬಂದು... ಗಲಾಟೆ ಮಾಡುತ್ತಿರುವಳಂತೆ ಎಂದಳು.

ಹೌದೆ? ಅದೇನು ಗಲಭೆ? ಸರಿಯಾಗಿ ತಿಳಿದು ಬಾ. ಏನಾದರೂ ನ್ಯಾಯ ಕೇಳಲು ಬಂದಿರಬಹುದು? ಎಂದು ನನ್ನ ನಾಲಿಗೆ ನುಡಿದರೂ ಎದೆ ಶಂಕೆಯಿಂದ ಡವಡವನೆ ಹೊಡೆದುಕೊಳ್ಳತೊಡಗಿತು.

ಇಲ್ಲಾ ಒಡತಿ ಅವಳ ಮಾತು ಕೇಳಿದರೆ ಪ್ರಭುಗಳನ್ನೇ ಅಪರಾಧಿಗಳನ್ನು ವಂತಿದೆ. ಅವಳು ಗರ್ಭಿಣಿ ಬೇರೆ. ಮುಖ ಲಕ್ಷಣ ನೋಡಿದರೆ... ತಾಪಸಿಯಂತೆ ತೋರುತ್ತಿಲ್ಲ. ನಾನಂತೂ ಅಷ್ಟು ಚೆಲುವಾದ ಹೆಂಗಸನ್ನು ಈವರೆಗೂ ನೋಡಿಲ್ಲ ಎಂದು ಬಿಟ್ಟಳು! ತಕ್ಷಣ ತನ್ನ ತಪ್ಪಿನ ಅರಿವಾದಂತೆ ನಾಲಿಗೆ ಕಚ್ಚಿಕೊಳ್ಳುತ್ತಾ ನಿಮ್ಮ ಹೊರತು ಎಂಬ ಒಗ್ಗರಣೆಯನ್ನು ಸೇರಿಸಿದಳು.

ಒಡತಿ ನಿಮ್ಮ ಚೆಲುವೆಂದರೆ ಸಾಧಾರಣವೆ? ಅದೇನು ಬಣ್ಣ? ಅದೇನು ಲಾವಣ್ಯ ಅದೆಂಥ ಮೈ ಬಿಗಿ ಎಂದು ಸದಾ ನನ್ನೆದುರೆದುರೆ ಮುಖಸ್ತುತಿ ಮಾಡುತ್ತಿದ್ದವಳು ಹೀಗೆ ಒಮ್ಮಿಂದೊಮ್ಮೆಲೇ ಬೇರೆ ಯಾರನ್ನೋ ಉತ್ಪ್ರೇಕ್ಷಿಸಿ ಮಾತಾಡಿದಾಗ ಮನಸ್ಸು ಒಂದು ಘಳಿಗೆ ಒಳಸರಿಯಿತು. ನನ್ನ ಚಿಂತಿತ ಮುಖ ನೋಡಿ ನೀವಿಷ್ಟು ಬೇಸರ ಪಡಬೇಕಿಲ್ಲ. ಪ್ರಭುಗಳು ಯಾವ ಅಳುಕೂ ಇಲ್ಲದೆ ಅವಳು ಯಾರೆಂದು ತನಗೆ ಗೊತ್ತೇ ಇಲ್ಲವೆಂದರು. ಆ ತಾಪಸರೂ ಬಹಳಷ್ಟು ವಾದ ಮಾಡಿದರು. ಪ್ರಭುಗಳು ಸ್ವತಃ ಸಿಂಹಾಸನದಿಂದ ಕೆಳಗಿಳಿದು ಬಂದಾಗ ಅವರ ಮುಖ ಅಗ್ನಿಕುಂಡದಂತೆ ಪ್ರಜ್ವಲಿಸುತ್ತಿತ್ತು. ಎಲೈ ಆರ್ಯೆ ನೀನಾರೆಂದು ನನಗೆ ಗೊತ್ತಿಲ್ಲ. ನಿನ್ನ ಉದರದಲ್ಲಿರುವ ಮಗುವಿಗೂ ನನಗೂ ಯಾವ ಸಂಬಂಧವೂ ಇಲ್ಲ. ನಾನು ಚಕ್ರಾಧಿಪತಿಯೆಂಬ ಒಂದೇ ಕಾರಣಕ್ಕೆ ನಿನ್ನ ಮಗನಿಗೆ ಈ ರಾಜ್ಯ ಸಿಗಲೆಂಬ ಲೋಭದಿಂದ ನೀನೀ ನೀಚ ಕೃತ್ಯಕ್ಕೆ ಮುಂದಾಗಿರುವಂತಿದೆ. ನಿನ್ನನ್ನು ನೋಡಿದರೆ ಪುಣ್ಯಾಂಗನೆಯ ಹಾಗೆ ತೋರುತ್ತಿರುವೆ. ಋಷ್ಯಾಶ್ರಮದ ಸ್ತ್ರೀಯರಂತೆ ನೀನಿಲ್ಲವೇ ಇಲ್ಲ. ಸ್ತ್ರೀಯೆಂಬ ಕಾರಣಕ್ಕೆ ನಿನ್ನನ್ನು ಇಷ್ಟು ಹೊತ್ತು ಸಹಿಸಿಕೊಂಡಿರುವೆ. ನನ್ನ ಚಾರಿತ್ರ್ಯಕ್ಕೆ ಧಕ್ಕೆ ತರುವ ಮಾತುಗಳನ್ನು ಕೇಳಿಸಿಕೊಂಡು ಮೌನವಾಗಿರುವೆ. ನೀನಿಲ್ಲಿಂದ ಹೋಗಬಹುದು ಎಂದು ಬಿಟ್ಟರು. ಒಡತಿ, ಆ ಹೆಣ್ಣು ಆವೇಶದಿಂದ ಧುಮುಗುಡುತ್ತಾ..

'ಚಂದ್ರವಂಶೀಯನಾದ ನಿನ್ನನ್ನು ಪುಣ್ಯಾತ್ಮನೆಂದುಕೊಂಡಿದ್ದೆ. ನನ್ನ ತಂದೆಯಿರದ ಹೊತ್ತಿನಲ್ಲಿ ಆಶ್ರಮಕ್ಕೆ ಬಂದು ಗಂಧರ್ವ ವಿವಾಹವೆಂದು ನನ್ನನ್ನು ನಂಬಿಸಿ ನನ್ನ ಕನ್ಯತ್ವವನ್ನು ಸೂರೆಗೊಂಡೆ. ಇಲ್ಲ ನೀನು ದುರಾತ್ಮ ಹೆಂಗಸೆಂದರೆ ಮೈತೆವಲಿಗೆ ಇರುವ ಸರಕುಗಳೆಂದುಕೊಂಡವನು ನಿನಗೆ ಏನು ನೆನಪೇ ಇಲ್ಲವೆಂದೆಯಲ್ಲವೆ? ಸುಳ್ಳು! ಐದಾರು ತಿಂಗಳಲ್ಲಿ ಜೊತೆಗೂಡಿದ ಹೆಣ್ಣನ್ನು ಯಾರೂ ಮರೆಯುವುದಿಲ್ಲ. ಬಹುಶಃ ನೀನಿದನ್ನು ನಿರೀಕ್ಷಿಸಿರಲಿಕ್ಕಿಲ್ಲ. ಯಾವುದೋ ಆಶ್ರಮದ ತಾಪಸ ಕನ್ಯೆ ರಾಜಧಾನಿಯವರೆಗೆ ಹುಡುಕಿಕೊಂಡು ಬರಲಾರಳೆಂದು ಕೊಂಡಿರಬೇಕು. ನನ್ನ ಗರ್ಭದಲ್ಲಿರುವ ಮಗು ನಿನ್ನದಲ್ಲದಿದ್ದರೆ... ನಾನಿಲ್ಲಿಯವರೆಗೆ ಬರುತ್ತಿರಲಿಲ್ಲ. ಇದು ನನ್ನ ಚಾರಿತ್ರ್ಯದ ಪ್ರಶ್ನೆ. ಏನೆಂದೆ ನೀನು? ನನ್ನ ಕುಲಾಚಾರಗಳು ಸರಿಯಿಲ್ಲವೆಂದೆ? ನಾನು ನಿನಗೆ ಪುಣ್ಯಾಂಗನೆಯಂತೆ ತೋರುತ್ತಿರುವೆನಾ? ಅಪ್ಸರಸಿಯ ಮಗಳು ನಾನು. ಅವಳಂತೆ ರೂಪಲಾವಣ್ಯಗಳು ಇದ್ದರೆ ಪುಣ್ಯ ಸ್ತ್ರೀಯಾಗುತ್ತೇನಾ? ಋಷ್ಯಾಶ್ರಮದ ಲಾಲನೆ ಪಾಲನೆಗಳಲ್ಲಿ ಅಪ್ಪಟ ಋಷಿಪುತ್ರಿಯೇ ಆಗಿದ್ದೆ. ನೀನು ಬರುವವರೆಗೆ... ನೀನು ಹೇಳುವ ಅಸಂಬದ್ಧವನ್ನು ಒಪ್ಪಿಕೊಂಡು ಹೋಗಲು ನಾನಿಲ್ಲಿಗೆ ಬಂದಿಲ್ಲ. ನನ್ನ ಕುಲಶೀಲಗಳನ್ನು ಸಾಬೀತು ಪಡಿಸಲೇಬೇಕು. ನನ್ನ ಪುಣ್ಯ ನೀನು ಕೊಟ್ಟ ರಾಜ ಮುದ್ರೆಯುಂಗುರ ನನ್ನ ಬೆರಳಲ್ಲಿ ಭದ್ರವಾಗಿದೆ ಎನ್ನುತ್ತಾ ತನ್ನ ಎಡಗೈಯನ್ನು ಮುಂದು ಮಾಡಿ ದಿಗ್ಭ್ರಾಂತಳಾದಳು. ಅಯ್ಯೋ ನನ್ನ ದೈವವೇ! ಅದೂ ನನ್ನ ಕೈಯಲ್ಲಿಲ್ಲವೆ? ಎಂದು ಹುಯ್ಯಲಿಟ್ಟಳು ಅವಳ ಸ್ಥಿತಿ ಎಂಥವರಿಗೂ ಎದೆ ಕರಗಿಸುವಂತಿತ್ತು.

ಪ್ರಭುಗಳು ಮಾತ್ರ ಆಹಾ! ಮಾಯಾಂಗನೆ ಎಂತೆಂತಹ ನಾಟಕಗಳನ್ನು ಕಟ್ಟುತ್ತಿರುವೆ? ನೋಡಿದವರು ನಿಜವಾಗಿಯೂ ನಾನೇ ಅಪರಾಧಿ ಎಂದು ಕೊಳ್ಳುವಂತೆ ಎಂದು ಬಿಟ್ಟರು. ಅಮಾತ್ಯರು ಸೇನಾಪತಿಗಳು ನಡುವೆ ಪ್ರವೇಶಿಸಿ ಸಾಕಿನ್ನು ನೀಚ ಹೆಂಗಸೆ ಶ್ವೇತಚ್ಛತ್ರ ಚಕ್ರಾಧಿಪತಿ ಪ್ರಭುಗಳೆಂದರೆ ಸಾಕ್ಷಾತ್ ದೈವ ಸ್ವರೂಪಿ. ಅವರ ಕುರಿತು ಇಲ್ಲಸಲ್ಲದ್ದನ್ನು ಹೇಳ ಹೊರಟರೆ ಸುಮ್ಮನಿರುವವರಲ್ಲ ನಾವು. ನಿಮ್ಮನೆಲ್ಲ ಇಷ್ಟು ಹೊತ್ತು ಭರಿಸಿದ್ದೇ ಹೆಚ್ಚಾಯ್ತು ನಡೆಯಿರಿ ಆಚೆಗೆ ಎಂದರು.

ಆ ಹೆಂಗಸಿನ ಜೊತೆ ಬಂದಿದ್ದ ಋಷಿ ಕುಮಾರರು ನೀವು ನಾಗರಿಕರು. ನಾವು ಕಾನನದ ಆಶ್ರಮವಾಸಿಗಳು. ಸುಳ್ಳು ಕಪಟಗಳನ್ನು ನಾವರಿಯೆವು. ಈ ಮಹಾರಾಜರು ಮಾಲಿನೀ ತೀರದಲ್ಲಿರುವ ಕಣ್ವಾಶ್ರಮಕ್ಕೆ ಬಂದಿದ್ದು ನಿಜ. ಶಕುಂತಲೆಯನ್ನು ವರಿಸಿದ್ದು ನಿಜ. ಈಗ ಇಲ್ಲವೆನ್ನುತ್ತಿದ್ದಾರೆ. ಬೇಕಾದರೆ ಅಲ್ಲಿ ನಿಂತಿರುವ ಪ್ರಭುಗಳ ಮಿತ್ರ... ಏನವರ ಹೆಸರು? ಮಕರಂದ ಹಾಂ... ಆ ಮಕರಂದನನ್ನೇ ಕೇಳಿ. ನಾವು ಹೇಳಿದ್ದು ಸುಳ್ಳೇ ಎಂದು? ಎಂದರು. ಮಕರಂದ ಪ್ರಭುಗಳು ಮಾಲಿನೀ ತೀರದ ಅರಣ್ಯಕ್ಕೆ ಬಂದಿದ್ದು ನಿಜ, ಇವರು ಹೇಳುವ ಆಶ್ರಮ ಗೀಶ್ರಮ ನಾ ಕಾಣೆ ಎಂದರು.

ಅವಳ ಮಾತನ್ನೇ ಕೇಳಿಸಿಕೊಳ್ಳುತ್ತಾ ಮರಗಟ್ಟುತ್ತಿದ್ದ ನನ್ನ ಅಂಗಾಂಗಗಳನ್ನು ಸಂತೈಸಿಕೊಳ್ಳುತ್ತಾ ಆಮೇಲೆ? ಎಂದೆ.

ಆ ಹೆಂಗಸು... ಶಕುಂತಲೆಯಂತೆ ಅವಳ ಹೆಸರು. ಮುಖ ಹುಬ್ಬುಗಳನ್ನು ಗಂಟು ಹಾಕಿ ಕೆಂಡದಂತಾಗಿದ್ದ ಕಣ್ಣುಗಳನ್ನು ತಿರುಗಿಸುತ್ತಾ ಎಲೈ ನೀಚನೆ ಈ ಹೊತ್ತು ನನ್ನ ಬಳಿ ಸಾಕ್ಷ್ಯಾಧಾರಗಳಿಲ್ಲದಿರಬಹುದು. ನೀನು ನನ್ನನ್ನು ಈ ಅವಸ್ಥೆಗೆ ಈಡು ಮಾಡಿದ್ದು ಎಷ್ಟು ಮಾತ್ರಕ್ಕೂ ಸುಳ್ಳಲ್ಲ. ನನ್ನ ಗರ್ಭದಲ್ಲಿ ಚಂದ್ರ ವಂಶದ ಬಸಿರು ಇರುವುದೇ ಆದರೆ... ನಾನು ಸತ್ಯಶೀಲಳೇ ಆಗಿದ್ದರೆ..., ನೀನೇ ನನ್ನ ಬಳಿ ಬಂದು ಅಂಗಲಾಚುವೆ. ಈ ಅರಮನೆಗೆ ಬರಬೇಕೆಂದು ಹಲುಬುವೆ. ಅಲ್ಲಿಯವರೆಗೂ ನಾನು ನಿನ್ನಿಂದ ದೂರವಿರುವೆ. ನನ್ನ ತಂದೆ ಕಣ್ವರ ಮನೆಗೂ ನಾನಿನ್ನು ಹೋಗಲಾರೆ ಎಂದು ಶಪಥ ಮಾಡಿ ಧಡದಢನೆ ನಡೆದು ಬಿಟ್ಟಳು ಮಹಾರಾಣಿ ಎಂದು ಮಾತು ನಿಲ್ಲಿಸಿದಳು.

ಇದೆಲ್ಲ ನಡೆವಾಗ ನೀನಲ್ಲೇ ಇದ್ದೆಯಾ? ಎಂದೆ. ಹೂಂ ಎಂದಳು ಅಂಜಿಕೆಯಿಂದ.

ನಿಜ ಹೇಳು ಹಂಸಿನಿ, ಈ ಇಡೀ ಪ್ರಕರಣದಲ್ಲಿ ಯಾರು ತಪ್ಪಿತಸ್ಥರೆನಿಸಿತು ನಿನಗೆ? ಎಂದೆ ಮಹಾರಾಜರು ನಿರ್ದೋಷಿಗಳೆಂದು ಅವರೇ ಹೇಳಿದರಲ್ಲ ಎನ್ನುವವಳ ಧ್ವನಿಯಲ್ಲಿ ಹುಸಿ ವಿಶ್ವಾಸವೊಂದು ಇಣುಕಿದಂತೆನಿಸಿತು.

ಮಹಾರಾಜರು ಬೇಕಾದ್ದನ್ನಲಿ. ಮಕರಂದನ ಮಾತು ಒತ್ತಟ್ಟಿಗಿರಲಿ. ಆ ಹೆಣ್ಣು... ಅವಳ ಒಡಲಲ್ಲಿ ಮುಖಭಾವದಲ್ಲಿ ನೋವು, ಸತ್ಯ, ಪ್ರಾಮಾಣಿಕತೆ ಇತ್ತೆ? ನೀನು ಆತ್ಮಸಾಕ್ಷಿಯಾಗಿ ಹೇಳು ಎಂದೆ. ತಟಕ್ಕನೆ ಮುಖ ಕೆಳಹಾಕಿದಳು. ತಗ್ಗಿದ ದನಿಯಲ್ಲಿ ಶಕುಂತಲೆ ಮಾತಾಡುವಾಗ ಅವಳ ಮಾತು ಸತ್ಯವೆನಿಸುತ್ತಿತ್ತು. ಆದರೂ ಮಹಾರಾಜರ ಮಾತನ್ನು ನಂಬದಿರುವಂತಿಲ್ಲ ಎಂದಳು.

## ಸೆಲ್ಫಿಗಳು

ಆಗ ಕೆಲವೇ
ಕೆಲವರು
ಶಿಲ್ಪಿಗಳು!
ಈಗ
ಎಲ್ಲರೂ
ಸೆಲ್ಫಿಗಳು!

—ಬಾಲು ಪಟಗಾರ

